daily Maintenance in ward No:05 Yelahanka ಕಡತದ ಸಂಖ್ಯೆ .....

New Town Sub-Division.

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

ವಿಷಯ:– [illegible] silt and tractor and labour for daily maintenance in ward no:05 Yelahanka New Town Sub Division.

*****

11 ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ–05, ಯಲಹಂಕ ಉಪನಗರ ಉಪವಿಭಾಗ ವ್ಯಾಪ್ತಿಯಲ್ಲಿ [illegible] silt and tractor and labour for daily maintenance in ward no:05 Yelahanka New Town Sub Division ಕಾಮಗಾರಿಯನ್ನು ನಿರ್ವಹಿಸಲು ವಾರ್ಡ್ ಸಮಿತಿ ಸಭೆಯಲ್ಲಿ ಅನುಮೋದನೆಯಾಗಿದ್ದು, **2022–23ನೇ ಸಾಲಿನ POW** ಪಟ್ಟಿಯಲ್ಲಿ ಸೇರಿಸಿ ಅನುದಾನವನ್ನು ನೀಡಲಾಗಿರುತ್ತದೆ.

2) ಅದರಂತೆ, ಸ್ಥಳ ಪರಿವೀಕ್ಷಣೆ ಮಾಡಿ ಈ ಮೇಲ್ಕಂಡ ಕಾಮಗಾರಿಯ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆ PWD SR, Bangalore Circle for year 2021-2022 ರ ದರಪಟ್ಟಿಯಂತೆ ರೂ.20.00 ಲಕ್ಷಗಳಿಗೆ ತಯಾರಿಸಲಾಗಿದೆ.

ಅಂದಾಜು ಪಟ್ಟಿಯಲ್ಲಿ ಅಗತ್ಯಕ್ಕನುಗುಣವಾಗಿ ಈ ಕೆಳಕಂಡ ಅಂಶಗಳನ್ನು ಅಳವಡಿಸಲಾಗಿದೆ.

1) ಹೈಡ್ರಾಲಿಕ್ ಎಕ್ಸಾವೇಟರ್‌ನ್ನು ಒದಗಿಸುವುದು
2) 40 ಹೆಚ್.ಪಿ.ಟ್ರಾಕ್ಟರ್
3) ಕೂಲಿ ಕಾರ್ಮಿಕರನ್ನು ನೇಮಿಸಿ ಕೆಲಸವನ್ನು ನಿರ್ವಹಿಸುವುದು..

3) ಮೇಲ್ಕಂಡ ಎಲ್ಲಾ ಅಂಶಗಳು ಸದರಿ ಕಾಮಗಾರಿಗೆ ಬಹಳ ಅವಶ್ಯಕವಾಗಿರುತ್ತದೆ. ಆದ್ದರಿಂದ ಇವುಗಳನ್ನು ಅಳವಡಿಸಿ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಈ ಕಾಮಗಾರಿಗೆ **2022–23ನೇ ಸಾಲಿನ POW ಅನುದಾನದಡಿಯಲ್ಲಿ** ಕಾಮಗಾರಿಯ ಸಂಕೇತ: ---------- ದೊರೆತಿದ್ದು, ಕೆಲಸವನ್ನು ತುರ್ತಾಗಿ ತೆಗೆದುಕೊಳ್ಳಬೇಕಾಗಿರುವುದರಿಂದ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕೆ ಮಂಡಿಸಿದೆ.

ಸ.ಅ (ವಾರ್ಡ್–ನಂ:05)

ಸ.ಕಾ.ಅ (ಯ.ಉ.ವಿ)

4) ಕಿ.ಟಿ (ಯ.ಎ)

ವಿಷಯ :

ಪುಟದ ಸಂಖ್ಯೆ ..... 07 .....

ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಂಡಿಕೆ (3) ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಯಲಹಂಕ ಉಪನಗರ ಉಪವಿಭಾಗರವರು ಮಾಡಿರುವ ಪ್ರಸ್ತಾವನೆಯಂತೆ, 2022–23ನೇ ಸಾಲಿನ (ಪಿ.ಒ.ಡಬ್ಲ್ಯೂ ಕಾಮಗಾರಿಗಳಿಗೆ) ವಾರ್ಷಿಕ ಆಯವ್ಯಯದ ಲೆಕ್ಕಶಿರ್ಷಿಕೆ ಪಿ–3726ರ ಅನುದಾನದಡಿ ಮಂಜೂರಾಗಿರುವ Engaging silt and tractor and labours for daily maintenance in ward no:05 Yelahanka New Town Sub Division ರ ವ್ಯಾಪ್ತಿಯಲ್ಲಿ ಶ್ರಮಿಕ ಆಳುಗಳು, ಟ್ರಾಕ್ಟರ್ ಹಾಗೂ ಜೆ.ಸಿ.ಬಿ ಯಂತ್ರಗಳನ್ನು ಉಪಯೋಗಿಸಿಕೊಂಡು ಮುಖ್ಯ ಮತ್ತು ಅಡ್ಡರಸ್ತೆಗಳಲ್ಲಿ ಹಾಗೂ ಪಾದಚಾರಿ ಮಾರ್ಗಗಳಲ್ಲಿ ಬಿದ್ದಿರುವ ಕಲ್ಲುಗಳನ್ನು ತೆಗೆಯುವುದು ಚರಂಡಿಯಲ್ಲಿ ತುಂಬಿರುವ ಹೂಳನ್ನು ತೆಗೆಯುವ ಕಾಮಗಾರಿಯನ್ನು ಕೈಗೊಳ್ಳಲು 2021–22ನೇ ಸಾಲಿನ ಲೋಕೋಪಯೋಗಿ ಇಲಾಖೆ ಎಸ್.ಆರ್ ದರಪಟ್ಟಿ ಹಾಗೂ ದಿನಾಂಕ:07–07–2022ರ ಪರಿಷ್ಕೃತ ದರಗಳನ್ನು ಅನುಸರಿಸಿ ರೂ.20.00 ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದ್ದು, ಸದರಿ ಅಂದಾಜು ಪಟ್ಟಿಗೆ ಮಾನ್ಯ ಆಯುಕ್ತರವರು ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಸಂಖ್ಯೆ:ಬಿ12(1) ಪಿ.ಆರ್/394/2021–22 ದಿನಾಂಕ:18–01–2022ರಂತೆ ನೀಡಿರುವ ಅಧಿಕಾರದನ್ವಯ ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ, ತಾಂತ್ರಿಕ ಮಂಜೂರಾತಿ ಹಾಗೂ ಡಿ.ಟಿ.ಎಸ್. ಅನುಮೋದನೆ ನೀಡಲು ತಮ್ಮ ಮುಂದಿನ ಆದೇಶ ಕೋರಿ ಸಲ್ಲಿಸಿದೆ.

08/08/2022

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

(5)

ಮುಖ್ಯ ಅಭಿಯಂತರರು (ಯ.ವ)

ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರ ವರದಿಯನ್ನು ತಮ್ಮ ಅವಗಾಹನೆಗೆ ತರುತ್ತಾ, 2022–23ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–3726 ರಡಿಯಲ್ಲಿ Engaging Silt and tractor and labour for daily maintenance in ward no-05 Yelahanka New Town Subdivision ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯ ದರಪಟ್ಟಿ 2021–22ರಂತೆ ಅಂದಾಜು ಪಟ್ಟಿಯನ್ನು ರೂ.20.00ಲಕ್ಷಗಳಿಗೆ ತಯಾರಿಸಿ ಆಡಳಿತಾತ್ಮಕ ಅನುಮೋದನೆ, ತಾಂತ್ರಿಕ ಮಂಜೂರಾತಿ ಮತ್ತು ಡಿಟಿಎಸ್ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಮಾನ್ಯ ಮುಖ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಮುಆ/ಪಿ.ಆರ್/93/2021–22, ದಿನಾಂಕ:06–07–2021ರ ಆದೇಶದಲ್ಲಿ ಕಾಮಗಾರಿಗಳಿಗೆ ಜಾಬ್ ಸಂಖ್ಯೆ ನೀಡುವ ವ್ಯವಸ್ಥೆಯನ್ನು ಬಿಬಿಎಂಪಿ ಅನುದಾನಗಳಿಗೆ ಆಯಾ ವಲಯ ಮುಖ್ಯ ಅಭಿಯಂತರರ ಕಛೇರಿಯಲ್ಲಿ ಹಾಗೂ ಸರ್ಕಾರದ ಅನುದಾನಗಳಿಗೆ ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಯಲ್ಲಿ ಅನುಮೋದಿತ ಕ್ರಿಯಾಯೋಜನೆಯಂತೆ ಕಾಮಗಾರಿಗಳಿಗೆ ಅಂದಾಜು ಪಟ್ಟಿ ತಯಾರಿಸಿ ಕಾಮಗಾರಿ ನಿರ್ವಹಣೆ ಪೂರ್ಣ ಛಾಯಾಚಿತ್ರಗಳೊಂದಿಗೆ ಅನ್ವಯವಾಗುವ ನಿರ್ವಹಣೆ ಕಾಮಗಾರಿಗಳಿಗೆ ರಸ್ತೆ ಇತಿಹಾಸ, ಆಡಳಿತಾತ್ಮಕ ಅನುಮೋನದೆ ಮತ್ತು ತಾಂತ್ರಿಕ ಅನುಮೋದನೆ ಪಡೆದು ಟೆಂಡರ್ ಪ್ರಕ್ರಿಯೆಗಳನ್ನು ಪೂರೈಸಿ ಟೆಂಡರ್ ಅಂತಿಮಗೊಳಿಸಿ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವ ಮೊದಲು ಜಾಬ್ ಸಂಖ್ಯೆ ಪಡೆಯಲು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಲಾಗಿರುತ್ತದೆ.

ಮುಂದುವರೆದು, ಮಾನ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:ಬಿ12(1)ಪಿಆರ್/394/2021–22, ದಿನಾಂಕ:18–01–2022ರಲಿನೀಡಿರುವ ಅಧಿಕಾರದನ್ವಯ ಪ್ರಸ್ತಾಪಿತ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ, ತಾಂತ್ರಿಕ ಮಂಜೂರಾತಿ ಮತ್ತು ಡಿಟಿಎಸ್ ಅನುಮೋದನೆ ನೀಡುವ ಸಂಬಂಧ ತಮ್ಮ ಮುಂದಿನ ಆದೇಶಕ್ಕಾಗಿ ಸಲ್ಲಿಸಿದೆ.

ಮೇಲ್ಕಂಡಂತೆ

ಮುಖ್ಯ ಅಭಿಯಂತರರು
ಯಲಹಂಕ ವಲಯ

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

ವಿಷಯ:– Engaging silt and tractor and labours for daily maintenance in ward no:05 Yelahanka New Town Sub Division. ಎಂಬ ಕಾಮಗಾರಿಯ ಟೆಂಡರ್ ಮೌಲ್ಯಮಾಪನದ ಬಗ್ಗೆ.

ಉಲ್ಲೇಖ:

1. ಕಾಮಗಾರಿ ಟೆಂಡರ್ ಪ್ರಕಟಣೆ ಸಂಖ್ಯೆ: BBMP/EE/YNK.D/ E-PMT/09/2022-23 dated:10-08-2022.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರದೇಶಗಳಲ್ಲಿ ಮೂಲಭೂತ ಸೌಕಾರ್ಯಗಳ ಅಭಿವೃದ್ದಿಗಾಗಿ 2022–23ನೇ ಸಾಲಿನ ವಾರ್ಷಿಕ ಆಯವ್ಯಯದ ಕಾರ್ಯಕ್ರಮದ ಅನುದಾನದಡಿಯಲ್ಲಿ ವಾರ್ಡ್‌ನಂ–05ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪ್ರದೇಶಗಳಲ್ಲಿ ಶ್ರಮಿಕ ಆಳುಗಳು, ಟ್ರಾಕ್ಟರ್ ಹಾಗೂ ಜೆ.ಸಿ.ಬಿ ಯಂತ್ರಗಳನ್ನು ಉಪಯೋಗಿಸಿಕೊಂಡು ಮುಖ್ಯ ಮತ್ತು ಅಡ್ಡರಸ್ತೆಗಳಲ್ಲಿ ಹಾಗೂ ಪಾದಚಾರಿ ಮಾರ್ಗಗಳಲ್ಲಿ ಬಿದ್ದಿರುವ ಕಲ್ಲುಗಳನ್ನು ತೆಗೆಯುವುದು ಚರಂಡಿಯಲ್ಲಿ ತುಂಬಿರುವ ಹೂಳನ್ನು ತೆಗೆಯುವ ಕಾಮಗಾರಿಯ ವಿವರ ಈ ಕೆಳಕಂಡಂತಿದೆ.

Sl No	Name of work	Estimate cost Rs in Lakhs
01	Engaging silt and tractor and labours for daily maintenance in ward no:05 Yelahanka New Town Sub Division	20.00
	Total	20.00

ಈ ಮೇಲ್ಕಂಡ ಕಾಮಗಾರಿಗೆ ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರಿಂದ ಅನುಮೊದನೆ ಪಡೆಯಲಾಗಿರುತ್ತದೆ. ಸದರಿ ಕಾಮಗಾರಿಗೆ 2021–22ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿ ಹಾಗೂ ದಿನಾಂಕ:07–07–2022ರ ಪರಿಷ್ಕೃತ ದರಗಳನ್ನು ಅನುಸರಿಸಿ ರೂ.20.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಮುಖ್ಯ ಅಭಿಯಂತರರು ಯಲಹಂಕ ವಲಯರವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ಸಂಖ್ಯೆ ಬೃ.ಬೆಂ.ಮ.ಪಾ/ ಮು.ಅ/ತಾ.ಮಂ/ಯ.ವ./ಪಿ.ಆರ್/ /2022–23 ದಿನಾಂಕ: ರಂತೆ ತಾಂತ್ರಿಕ ಮಂಜೂರಾತಿಯನ್ನು ಮತ್ತು ಕರಡು ಟೆಂಡರ್ ಶೆಡ್ಯೂಲ್ – ಬಿ ಗೆ ಅನುಮೋದನೆ ನೀಡಿರುತ್ತಾರೆ.

ಈ ಮೇಲ್ಕಂಡ ಕಾಮಗಾರಿಗೆ ಸಂಬಂದಿಸಿದಂತೆ ಉಲ್ಲೇಖ (1) ರಂತೆ ದಿನಾಂಕ: 10–08–2022 ರಂದು KTPP.Act and KW-4 Standard Tender Document ಅನುಸಾರ E-Procurement ಮುಖಾಂತರ ಟೆಂಡರ್ ಕರೆದಿದ್ದು, ಸದರಿ ಟೆಂಡರ್ ಪ್ರಕಟಣೆಯನ್ನು ಸಾರ್ವಜನಿಕ ಸಂಪರ್ಕಾಧಿಕಾರಿಗಳ ಮುಖಾಂತರ ಡೆಕನ್‌ಹೆರಾಲ್ಡ್ ದಿನಪತ್ರಿಕೆಯಲ್ಲಿ ದಿನಾಂಕ:11–08–2022 ರಂದು ಪ್ರಕಟಿಸಲಾಗಿರುತ್ತದೆ.

ವಿಷಯ :

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಸದರಿ ಟೆಂಡರ್‌ನ ವಿವರಗಳು ಈ ಕೆಳಕಂಡತಿರುತ್ತದೆ.

ಕ್ರ.ಸಂ	ಅಂಶಗಳು	ವಿವರಗಳು
1	ಕೆಲಸದ ಹೆಸರು	Engaging silt and tractor and labours for daily maintenance in ward no:05 Yelahanka New Town Sub Division
2	ಅಂದಾಜು ಮೊತ್ತ	ರೂ. 20.00 ಲಕ್ಷಗಳು
3	ಇಂಡೆಂಟ್ ನಂ	BBMP/2022-23/OW/WORK_INDENT-52788
4	ಅನುದಾನದ ಯೋಜನೆ ಹೆಸರು	2022–23 ನೇ ಸಾಲಿನ ಆಯವ್ಯಯದ ವಾರ್ಷಿಕ ನಿರ್ವಹಣೆ
5	ಲೆಕ್ಕಶಿರ್ಷಿಕೆ	ಪಿ–3726
6	ಅಡಳಿತಾತ್ಮಕ ಅನುಮೋದನೆ	ಮುಖ್ಯ ಅಭಿಯಂತರರು, ಯಲಹಂಕ ವಲಯ, ಬಿಬಿಎಂಪಿ ರವರಿಂದ ಪಡೆಯಲಾಗಿದೆ.
7	ತಾಂತ್ರಿಕ ಮಂಜೂರಾತಿ ಮೊತ್ತ	ರೂ.20.00 ಲಕ್ಷಗಳು
8	ತಾಂತ್ರಿಕ ಮಂಜೂರಾತಿ ಸಂಖ್ಯೆ	ಸಂಖ್ಯೆ.ಬೃ.ಬೆಂ.ಮ.ಪಾ/ಮು.ಅ/ಯವ/ತಾ.ಮಂ/ / 2022–23ದಿ: ರಂತೆ
9	ಟೆಂಡರ್‌ಗೆ ಇಟ್ಟ ಮೊತ್ತ	ರೂ. 16.93 ಲಕ್ಷಗಳು
10	ಅನ್ ಲೈನ್ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	23-08-2022 upto 16.00 hrs
11	ಅನ್ ಲೈನ್ ಇ – ಪ್ರಕ್ಯೂರ್ ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ	24-08-2022 after 16.00 hrs

(10)

ಮೇಲ್ಕಂಡ ಟೆಂಡರ್ ಪ್ರಕಟಣೆಗೆ ಸಂಬಂದಿಸಿದಂತೆ ದಿನಾಂಕ:24–08–2022 ರಂದು ಟೆಂಡರ್‌ಅನ್ನು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಗುತ್ತಿಗೆದಾರರ ವಿವರಗಳು ಈ ಕೆಳಕಂಡಂತಿರುತ್ತದೆ.

1) Sri SIDDESHA
2) Sri SHIVAKUMAR N

ಮೇಲ್ಕಂಡ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸಿದ್ದು, ಬಿಡ್ದುದಾರರ ದಾಖಲೆಗಳನ್ನು ಪರಿಶೀಲಿಸಲಾಗಿ, Sri SIDDESHA and Sri SHIVAKUMAR N ಇಬ್ಬರು ಬಿಡ್ದುದಾರರು ನಮೂದಿಸಿರುವ ದರಗಳ ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ ಸಂ	ಗುತ್ತಿಗೆದಾರರ ಹೆಸರು	ಟೆಂಡರ್ ಗಿಟ್ಟ ಮೊತ್ತ 2021–22ನೇ ಸಾಲಿನ ಅನುಮೋದಿತ ದರಗಳಿಗೆ ಹಾಗೂ ಪರಿಷ್ಕೃತ ದರಗಳಿಗೆ ಹೊಲಿಸಿದಾಗ.	ಗುತ್ತಿಗೆ ದಾರರು ನಮೂದಿಸಿರುವ ದರಗಳು	2021–22ನೇ ಸಾಲಿನ ಧರಗಳಿಗೆ ಹಾಗೂ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡ ವಾರು	ಷರಾ
01	SIDDESHA	1693694.40	1520958.40	(–)10.20% ಕಡಿಮೆ	
02	SHIVAKUMAR N		1608410.00	(–)5.04% ಕಡಿಮೆ	

(11)

ಮೇಲ್ಕಂಡ ಇಬ್ಬರು ಗುತ್ತಿಗೆದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ Sri,SIDDESHA ರವರು ಟೆಂಡರ್ ನಿಯಮದ ಪ್ರಕಾರ ವ್ಯತ್ಯಾಸದ ಮೊತ್ತವನ್ನು ಟೆಂಡರ್ ತೆರೆಯುವ ದಿನಾಂಕದೊಳಗಾಗಿ ಕಛೇರಿಗೆ ಡಿ.ಡಿ.ಯನ್ನು ಸಲ್ಲಿಸಬೇಕಾಗಿತ್ತು.

ವಿಷಯ .....

ಕಂಡಿಕೆ ಸಂಖ್ಯೆ	

(12)

(13)

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಟಿಪ್ಪಣಿಗಳು ಮತ್ತು ಆಜ್ಞೆಗಳು

ಆದರೆ ಸದರಿಯವರು ವ್ಯತ್ಯಾಸ ಮೊತ್ತದ ಡಿ.ಡಿಯನ್ನು ಟೆಂಡರ್ ತೆರೆಯುವ ದಿನಾಂಕದೊಳಗೆ ಸಲ್ಲಿಸದ ಕಾರಣ ಸದರಿಯವರ ಬಿಡ್ಡನ್ನು ತಿರಸ್ಕರಿಸಲಾಗಿದೆ.

(12)

ಮುಂದುವರೆದು ಉಳಿದ ಬಿಡ್ದುದಾರರು ಸಲ್ಲಿಸಿರುವ ದಾಖಲಾತಿಗಳು ಸಮರ್ಪಕವಾಗಿದ್ದು, ಅತಿ ಕಡಿಮೆ ದರ ನಮೂದಿಸಿರುವ ಗುತ್ತಿಗೆದಾರರಾದ **Sri SHIVAKUMAR N** ರವರು ನಮೂದಿಸಿರುವ ದರಗಳಾದ ರೂ. 16,08,410.00ಗಳನ್ನು 2021–22ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿ ಹಾಗೂ ದಿನಾಂಕ: 07–07–2022ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡ(–)5.04% ಕಡಿಮೆ ದರಗಳಾಗಿರುತ್ತದೆ . ಆದುದರಿಂದ ಸದರಿಯವರ ದರಗಳನ್ನು ಅನುಮೋದಿಸಲು ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

15/09/2022

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ

(13)

ಮುಖ್ಯ ಅಭಿಯಂತರರು (ಯಲಹಂಕ ವಲಯ)

ಕಾರ್ಯಪಾಲಕ ಅಭಿಯಂತರರು (ಯಲಹಂಕ ವಿಭಾಗ)ರವರ ವರದಿಯಂತೆ ಸದರಿ ಕಾಮಗಾರಿಗೆ ದಿನಾಂಕ:24–08–2022ರಂದು ಟೆಂಡರ್ ತೆರಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಎಲ್–1 ಗುತ್ತಿಗೆದಾರರಾದ Sri.Siddesha ರವರು ಟೆಂಡರ್ ನಿಯಮದ ಪ್ರಕಾರ ವ್ಯತ್ಯಾಸದ ಮೊತ್ತವನ್ನು ಟೆಂಡರ್ ತೆರೆಯುವ ದಿನಾಂಕದೊಳಗಾಗಿ ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ ಕಛೇರಿಗೆ ಡಿಡಿಯನ್ನು ಸಲ್ಲಿಸದ ಕಾರಣ ಸದರಿಯವರ ಬಿಡ್‌ನ್ನು ತಿಸ್ಕರಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರು ತಿಳಿಸಿದ್ದು, ಎಲ್–2 ಗುತ್ತಿಗೆದಾರರಾದ Sri.Shivakumar.Nರವರು ನಮೂದಿಸಿರುವ ದರ ರೂ.16,08,410.00ಗಳಾಗಿದ್ದು, 2021–22ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿ ಹಾಗೂ ದಿನಾಂಕ:07–07–2022ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇ(–) 5.04%ಕಡಿಮೆ ದರಗಳಾಗಿದ್ದು, ಎಲ್–2 ಗುತ್ತಿಗೆದಾರರು ನಮೂದಿಸಿರುವ ದರಗಳಿಗೆ ಕಾ.ಪಾ.ಅ(ಯ.ವಿ)ರವರು ಅನುಮೋದನೆ ಕೋರಿರುವುದರಿಂದ, ತಮ್ಮ ಮುಂದಿನ ಆದೇಶಕ್ಕೆ ಸಲ್ಲಿಸಿದೆ.

(14)

ಮುಖ್ಯ ಅಭಿಯಂತರರು (ಯ.ವ) ದಿ.6.(ಯ.ವ) ಕಡತ ವೀಕ್ಷಿಸಿ ಸೂಚನೆ ನೀಡಿದೆ.

ಮುಖ್ಯ ಅಭಿಯಂತರರು ಪೂ.ತಿ.ನೋ
ಯಲಹಂಕ ವಲಯ
ಬೆಂಗಳೂರು

ವಿಷಯ :

ಪುಟದ ಸಂಖ್ಯೆ ..... -06-

ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
(15)	2022–23ನೇ ಸಾಲಿನ ವಾರ್ಷಿಕ ಕಾರ್ಯಕ್ರಮದ ಅನುದಾನದ ಅಭಿವೃದ್ಧಿ ಯೋಜನೆಯಡಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಯಾದ "Engaging silt and tractor and labours for daily maintenance in ward no:05 Yelahanka New Town Sub Division " ಎಂಬ ಕಾಮಗಾರಿಗೆ ಟೆಂಡರ್ ಅನುಮೋದನೆ ಕೋರಿ ಮಾನ್ಯ ಮುಖ್ಯ ಅಭಿಯಂತರರು, ಯಲಹಂಕ ವಲಯ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಕಂಡಿಕೆ (14) ರಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ ಮುಖ್ಯ ಅಭಿಯಂತರರು, ಯಲಹಂಕ ವಲಯ ರವರು ಮೊತ್ತ ರೂ.16,08,410/–ಗಳಿಗೆ ಅನುಮೋದನೆ ನೀಡಿರುತ್ತಾರೆ.
(16)	ಕಂಡಿಕೆ ಮುಂದುವರೆದಂತೆ ಸರ್ಕಾರದ ಆದೇಶ ಸಂಖ್ಯೆ: FD 20 CSL 2022 Dated:15-07-2022 and ಸಂಖ್ಯೆ:ಸಂಖ್ಯೆ:ಆಇ447ವೆಚ್ಚ–12/2022 ದಿನಾಂಕ:30–07–2022 ರಂತೆ ಟೆಂಡರ್ ಮೊತ್ತಕ್ಕೆ ಶೇಕಡ +18% GST Charges Amount Rs.2,89,513/- ಗಳನ್ನು ಸೇರಿಸಿ ಒಟ್ಟು ಮೊತ್ತ ರೂ.18,97,923/–ಗಳಾಗಿದ್ದು ಗುತ್ತಿಗೆದಾರರಾದ. SRI.SHIVAKUMAR N, ರವರು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಆರ್ಥಿಕ ಇಲಾಖೆ ರವರ ಆದೇಶ ಸಂಖ್ಯೆ:ಅಇ/456/ವೆಚ್ಚ/12/2022 ಬೆಂಗಳೂರು ದಿನಾಂಕ: 10–08–2022 ರಿಂದ ಅನ್ವಯವಾಗುವಂತೆ ಭದ್ರತಾ ಠೇವಣಿ (Performance Security) ಮೊತ್ತವನ್ನು ಶೇಕಡ 5% ರಿಂದ ಶೇಕಡ 3% ನಿಗಧಿಪಡಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಗುತ್ತಿಗೆದಾರರು ಟೆಂಡರ್ ಮೊತ್ತಕ್ಕೆ ಭದ್ರತಾ ಠೇವಣಿ (Performance Security) ಮೊತ್ತವನ್ನು ಶೇಕಡ 3% ರಷ್ಟು **Rs.48,250/-** in the form of DD Vide No:675592, Dated:07.01.2023 **issued on Indian Bank Judicial Layout Branch, Bangalore** and Difference amount received of Rs.85,000/- in the form of DD Vide No:675486, Dated:22-08-2022 from **Indian Bank Judicial Layout Branch, Bangalore** ನೀಡಿರುತ್ತಾರೆ. ಆದುದರಿಂದ ಗುತ್ತಿಗೆದಾರೊಂದಿಗೆ ಕರಾರು ಒಡಂಬಡಿಕೆ ಮಾಡಿಕೊಂಡು ಅನ್‌ಲೈನ್ ಮೂಲಕ ಕಾರ್ಯಾದೇಶ (Work Order) ನೀಡಲಾಗಿದೆ. 13/01/2023 ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ